under Market Intervention Scheme whenever prices in the market fall, steps will be taken to purchase the commodities from the farmers under Market Intervention Scheme.

ರಿಯಾಯಿತಿ ದರದಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳ ಸರಬರಾಜು

969 (1182) ಶ್ರೀ ಖಾದರ್. ಯು.ಟಿ. (ಮಂಗಳೂರು) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೈತರಿಗೆ ಕಳೆದ 3 ವರ್ಷಗಳಿಂದ ರಿಯಾಯಿತಿ ದರದಲ್ಲಿ ರಸಗೊಬ್ಬರ ಮತ್ತು ಬಿತ್ತನೆ ಬೀಜಗಳನ್ನು ಒದಗಿಸಲು ಸರ್ಕಾರ ಎಷ್ಟು ಹಣವನ್ನು ವೆಚ್ಚ ಮಾಡಿದೆ;

ಆ) ಕೇಂದ್ರ ಸರ್ಕಾರದಿಂದ ರೈತರಿಗೆ ಯಾವ ಯಾವ ಸವಲತ್ತುಗಳು ಬರುತ್ತವೆ (ವಿವರ ಒದಗಿಸುವುದು)?

ಶ್ರೀ ಉಮೇಶ್ ಕತ್ತಿ (ಕೃಷಿ ಸಚಿವರು) :

ಅ) ರಸಗೊಬ್ಬರ :

ರಾಜ್ಯ ಸರ್ಕಾರದ ವತಿಯಿಂದ ರಸಗೊಬ್ಬರಕ್ಕೆ ಯಾವುದೇ ಸಹಾಯಧನವನ್ನು ನೀಡುತ್ತಿಲ್ಲ. ರಸಗೊಬ್ಬರದ ಸಹಾಯಧನವು ಕೇಂದ್ರ ಸರ್ಕಾರದ ನೀತಿ–ನಿಯಮಗಳಿಗೆ ಒಳಪಟ್ಟಿರುತ್ತದೆ.

Fertilizers:

The State Govt. Is not providing any subsidy for fertilizers. It is a policy matter of Govt. of India.

ಬಿತ್ತನೆ ಬೀಜ:

ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

Seeds:

Information furnished in **Annexure-1.**

ಆ) ಕೇಂದ್ರ ಸರ್ಕಾರದಿಂದ ರೈತರಿಗೆ ದೊರೆಯುವ ಸವಲತ್ತುಗಳ ವಿವರಗಳನ್ನು ಅನುಬಂಧ–2 ರಲ್ಲಿ ನೀಡಿದೆ.

Facilities to farmers under Central Government Scheme is furnished in Annexure-2

ಅನುಬಂಧ–1

(ವಿತರಣೆ – ಲಕ್ಷ ಕ್ವಿಂಟಾಲುಗಳಲ್ಲಿ ; ಮೊಬಲಗು– ರೂ. ಕೋಟಿಗಳಲ್ಲಿ)

ವರ್ಷ	ವಿವರ	ರಾಜ್ಯ ಸರ್ಕಾರದ ಯೋಜನೆ	ಕೇಂದ್ರ ಸರ್ಕಾರದ ಯೋಜನೆ				ಒಟ್ಟು
		SFMF	RKVY	PMRP	NFSM	ISOPOM	
2008–09	ವಿತರಣೆ	0.87	2.85	1.13	0.35	0.50	5.7
	ಮೊಬಲಗು	16.83	28.16	14.05	3.44	6.00	68.48
2009–10	ವಿತರಣೆ	1.91	6.15	2.20	1.78	0.38	12.42
	ಮೊಬಲಗು	48.21	141.49	34.07	17.37	4.634	245.774
2010–11	ವಿತರಣೆ	1.33	3.94	1.33	0.88	2.24	9.72
	ಮೊಬಲಗು	33.69	38.94	15.41	9.07	26.95	124.06
ಒಟ್ಟು	ವಿತರಣೆ	4.11	12.94	4.66	3.02	3.12	27.85
	ಮೊಬಲಗು	98.73	208.59	63.53	29.90	37.43	438.18

ಅನುಬಂಧ – 2

ಕೇಂದ್ರ ಸರ್ಕಾರದಿಂದ ರೈತರಿಗೆ ದೊರೆಯುವ ಸವಲತ್ತುಗಳು

1. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (2401–00–800–1–57)

ಕೃಷಿ ವಲಯದ ಬೆಳವಣಿಗೆಯನ್ನು ಶೇ. 4ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರವು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು ಎಲ್ಲಾ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಭೂಚೇತನ ಕಾರ್ಯಕ್ರಮದಡಿ ರೈತರಿಗೆ ಶೇ.50ರ ರಿಯಾಯಿತಿ ದರದಲ್ಲಿ ಲಘು ಪೋಷಕಾಂಶಗಳು, ಜಿಪ್ಸಂ ಪೂರೈಸಲಾಗುತ್ತಿದೆ. ಬೀಜ ಅಭಿಯಾನ ಕಾರ್ಯಕ್ರಮದಡಿ ಶೇ.50 ರಿಯಾಯಿತಿ ದರದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸಲಾಗುತ್ತಿದೆ. ರೈತ ಶಕ್ತಿ ಗುಂಪುಗಳನ್ನು ರಚಿಸಿ ಬೀಜ ನಿಧಿಯಾಗಿ ರೂ. 10000 ಗಳನ್ನು ನೀಡಲಾಗುತ್ತಿದೆ. ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ಕೃಷಿ ಯಾಂತ್ರೀಕರಣ ಅಭಿಯಾನ ಕಾರ್ಯಕ್ರಮಗಳಡಿ ರೈತರಿಗೆ ಶೇ.50ರ ರಿಯಾಯಿತಿ ದರದಲ್ಲಿ ಕೃಷಿ ಸಂಸ್ಕರಣಾ ಉಪಕರಣ ಹಾಗೂ ಕೃಷಿ ಯಂತ್ರೋಪಕರಣಗಳನ್ನು ವಿತರಿಸಲಾಗುತ್ತಿದೆ.

2. ಹತ್ತಿಯ ಬಗ್ಗೆ ತಾಂತ್ರಿಕ ಆಯೋಗದಡಿ ಕಿರು ಆಯೋಗ–II: (2401-00-108-1-13)

ಈ ಯೋಜನೆಯಡಿ ಹತ್ತಿ ಬೆಳೆ ಅಭಿವೃದ್ಧಿಗೆ ಸಂಬಂಧಿಸಿದಂತೆ ನೂತನ ತಾಂತ್ರಿಕತೆಗಳ ಅಳವಡಿಕೆ ಕುರಿತು ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಅವಶ್ಯವಿರುವ ಪರಿಕರಗಳಾದ ಕೃಷಿ ಯಂತ್ರೋಪಕರಣಗಳು, ಧೃಡೀಕೃತ ಬಿತ್ತನೆ ಬೀಜಗಳು, ಲಘು ನೀರಾವರಿ ಉಪಕರಣಗಳು ಇತ್ಯಾದಿಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ.

3. ಐಸೋಪಾಂ ಯೋಜನೆ: (2401–00–114–0–01)

ಈ ಯೋಜನೆಯಡಿ ಎಣ್ಣೆಕಾಳು ಮತ್ತು ಮುಸುಕಿನ ಜೋಳ ಬೆಳೆಗಳ ಸಮಗ್ರ ಅಭಿವೃದ್ಧಿಗೆ ಬಿತ್ತನೆ ಬೀಜ, ಜೈವಿಕ ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ ಮತ್ತು ಉಪಕರಣ, ಮಣ್ಣು ಸುಧಾರಕಗಳು, ಬೀಜೋತ್ಪಾದನೆ ಇತ್ಯಾದಿ ಘಟಕಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ.

4 ಲಘು ನೀರಾವರಿ ಯೋಜನೆ : (2401–00–108–1–15)

ಈ ಯೋಜನೆಯಡಿ ತುಂತುರು ನೀರಾವರಿ ಹಾಗೂ ಹನಿ ನೀರಾವರಿ ಘಟಕಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ವಿತರಣೆ ಮಾಡಲಾಗುತ್ತಿದೆ.

5. ನೂತನ ಕೃಷಿ ವಿಸ್ತೃತ ನಿರ್ವಹಣಾ ಯೋಜನೆ: (2401–00–800–1–32)

ಈ ಯೋಜನೆಯಲ್ಲಿ ಉತ್ತಮ ತಳಿಬೀಜಗಳ ವಿತರಣೆ, ಕಬ್ಬಿನ ತುಂಡುಗಳ ವಿತರಣೆ ಹಾಗೂ ಕೃಷಿ ಯಂತ್ರೋಪಕರಣಗಳನ್ನು ಶೇ. 50ರ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

6. ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ : (2401–00–800–1–53)

ಈ ಯೋಜನೆಯಡಿ ಕೃಷಿ ವಿಸ್ತರಣೆಯಡಿ ತೊಡಗಿರುವ ಕೃಷಿ ಮತ್ತು ಇತರೆ ಅಭಿವೃದ್ಧಿ ಇಲಾಖೆಗಳು, ಸರ್ಕಾರೇತರ ಸಂಘ ಸಂಸ್ಥೆಗಳು, ಸಂಶೋಧನೆ ಹಾಗೂ ತಾಂತ್ರಿಕ ಪ್ರಸಾರ ಘಟಕಗಳ ಮಧ್ಯೆ ಸಮನ್ವಯ

ತರುವ ಮೂಲಕ ರೈತರಿಗೆ ಉತ್ತಮ ಗುಣಮಟ್ಟದ ವಿವಿಧ ಇಲಾಖೆಗಳ ವಿಸ್ತರಣಾ ಸೇವೆ ಹಾಗೂ ನೂತನ ತಂತ್ರಜ್ಞಾನವನ್ನು ಒದಗಿಸುವುದಾಗಿದೆ.

7. ರಾಷ್ಟ್ರೀಯ ಆಹಾರ ಭದ್ರತಾ ಮಿಷನ್ :

ಈ ಯೋಜನೆಯಡಿ ಅಧಿಕ ಇಳುವರಿ ತಳಿಗಳು ಹಾಗೂ ಹೈಬ್ರಿಡ್ ಬಿತ್ತನೆ ಬೀಜಗಳು, ಲಘು ಪೋಷಕಾಂಶಗಳು, ಕೃಷಿ ಸುಣ್ಣ ಮತ್ತು ಕೃಷಿ ಯಂತ್ರೋಪಕರಣಗಳನ್ನು ಶೇ. 50ರ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.

ರಸ್ತೆಗಳ ರಿಪೇರಿ

970 (354) ಶ್ರೀ ಕುಲಕರ್ಣಿ ಶ್ರೀಕಾಂತ್ ಸುಬ್ಬಾರಾವ್ (ಜಮಖಂಡಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯತ್‌ನಿಂದ ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಗೆ ಬಂದಿರುವ ರಸ್ತೆ ಎಷ್ಟು;

ಆ) ಸದರಿ ರಸ್ತೆಗಳ ರಿಪೇರಿಗಾಗಿ ಇಲಾಖೆ ನೀಡಿರುವ ಹಣ ಪ್ರತಿ ಕಿಲೋ ಮೀಟರ್‌ಗೆ ಎಷ್ಟು;

ಇ) ಕಪ್ಪು ಮಣ್ಣಿನ ನೀರಾವರಿ ಹೊಂದಿರುವ ಜಮಖಂಡಿ ತಾಲ್ಲೂಕಿನ ರಸ್ತೆಗಾಗಿ ವಿಶೇಷ ಧನಸಹಾಯ ನೀಡಲಾಗಿದೆಯೇ;

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ 167.40 ಕಿಮೀ ಉದ್ದದ 24 ಗ್ರಾಮೀಣ ರಸ್ತೆಗಳನ್ನು ಜಿಲ್ಲಾಮುಖ್ಯ ರಸ್ತೆಗಳೆಂದು ಮೇಲ್ದರ್ಜೆಗೇರಿಸಿ ಲೋಕೋಪಯೋಗಿ ಇಲಾಖೆಯ ವಶಕ್ಕೆ ಪಡೆಯಲಾಗಿದೆ.

ಆ) 2011–12ನೇ ಸಾಲಿನಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ರಿನವಲ್ ಹಾಗೂ ದುರಸ್ತಿ ಸೇರಿ ಪ್ರತಿ ಕಿಮೀಗೆ ಸಾಮಾನ್ಯವಾಗಿ ಜಿಲ್ಲಾ ಮುಖ್ಯ ರಸ್ತೆಗಳಿಗೆ ಸರಾಸರಿ ಪ್ರತಿ ಕಿಮೀ ರಸ್ತೆಗೆ ರೂ.25 ಸಾವಿರದಿಂದ 30 ಸಾವಿರ ಅನುದಾನವನ್ನು ರಿಪೇರಿಗಾಗಿ ನೀಡಲಾಗುತ್ತದೆ. 2011–12ನೇ ಸಾಲಿನಲ್ಲಿ 13ನೇ ಹಣಕಾಸು (13th Finance) ನಲ್ಲಿ ಅನುದಾನ ಲಭ್ಯವಾಗಿರುವುದರಿಂದ ರೂ.67,100–00 ಗಳಷ್ಟು ನಿಗದಿಪಡಿಸಿದೆ.

ಇ) ಯಾವುದೇ ವಿಶೇಷ ಧನ ಸಹಾಯ ನೀಡಿರುವುದಿಲ್ಲ.